ನಿಮಿಷ ಅಂಗಲಾಚುವಿಕೆಯನ್ನ ಮುಂದುವರಿಸಿದ. ಅವನ ಮಾತುಗಳತ್ತ ಕಿವಿನೆಟ್ಟು ಕುರ್ಚಿಯಲ್ಲಿ ತಳವಿಟ್ಟ ಶಿಶಿರ ಅಂಗಡಿಯೊಳಗೆಲ್ಲಾ ದೃಷ್ಟಿ ಹರಿಸಿದ. ಆಗಷ್ಟೇ ದೂಳಿನ ಸಣ್ಣ ಮಳೆಯೊಂದು ಸುರಿದು ಹೋದಂತಿತ್ತು ಆ ಕೋಣೆಯೊಳಗಿನ ಸ್ಥಿತಿ. ಮರದ ರ್‍ಯಾಕ್‌ನಲ್ಲಿ ಅರ್ಧ ಖರ್ಚಾಗಿ ಉಳಿದ ನೋಟ್ ಪುಸ್ತಕಗಳು ಆ ದೂಳನ್ನೇ ಹೊದ್ದು ಬಿಮ್ಮನೆ ಕುಳಿತಿದ್ದವು. ಉರುಟು ಕರಡಿಗೆಯೊಳಗೆ ವಾಲಿಸಿಟ್ಟ ಬಣ್ಣದ ಪೆನ್ಸಿಲ್‌ಗಳು ನಿಂತಲ್ಲೇ ನಿದ್ರೆ ಹೋದಂತೆ ಕಾಣುತ್ತಿದ್ದವು. ರ್‍ಯಾಕ್ ತುದಿಯಲ್ಲಿ ನಗುವ ಬುದ್ಧನ ವಿಗ್ರಹವೊಂದು ಶತಮಾನದಿಂದ ಹೀಗೇ ಧ್ಯಾನಿಸುತ್ತಿರುವಂತೆ ಕುಳಿತಿತ್ತು. ಅರ್ಧ ಮುಚ್ಚಿದ ಕಾಗದದ ಬಾಕ್ಸ್‌ನೊಳಗಿನ ಎರೇಸರ್, ಶಾರ್ಪ್‌ನರ್‌ಗಳು ಏನನ್ನೂ ಅಳಿಸಲಾಗದೇ, ಏನನ್ನೂ ಹೆರೆಯಲಾಗದೆ ಅಸಹಾಯಕವಾಗಿ ಮಲಗಿದ್ದವು. ಗೋಡೆಗೆ ತೂಗುಹಾಕಿದ ಪ್ಯಾಕೆಟ್‌ನೊಳಗಿನ ಮೊಬೈಲ್‌ನ ಅಂಗಿ ಚಡ್ಡಿಗಳು ತಮ್ಮನ್ನು ತೊಡುವವರಿಗಾಗಿ ತೀವ್ರವಾಗಿ ಕಾಯುತ್ತಿರುವಂತೆ ಭಾಸವಾಗುತ್ತಿತ್ತು. ಗೋಡೆಯಲ್ಲಿದ್ದ, ಚಂದದ ಹುಡುಗಿಯೊಬ್ಬಳು ಕೈಮುಗಿದು ನಿಂತ ಚಿತ್ರವಿರುವ ಕ್ಯಾಲೆಂಡರ್ ಇನ್ನೂ ಕಳೆದ ತಿಂಗಳನ್ನೇ ತೋರಿಸುತ್ತಾ ನೇತಾಡುತ್ತಿತ್ತು. ಅದನ್ನು ನೋಡಿದ ಶಿಶಿರನಿಗೆ ಇಲ್ಲಿ ಕೆಲದಿನಗಳಿಂದ ಕಾಲ ನಿಂತೇ ಹೋಗಿದೆಯೇನೋ ಎಂದು ತೀವ್ರವಾಗಿ ಅನ್ನಿಸತೊಡಗಿತು. ಅಷ್ಟರಲ್ಲಿ ಕೊನೆಗೂ ಒಂದು ವಾರದ ಸಮಯವನ್ನು ಪಡೆದ ಸೂರಿ ಫೋನಿಟ್ಟು ಉಸ್ಸಪ್ಪಾ ಎಂದು ನಿಟ್ಟುಸಿರಿಟ್ಟ.

ಯಾಕೋ ಶಿಶಿರನಿಗೆ ಆ ನಿಟ್ಟುಸಿರು ಅವನ ಅಂಗಡಿಯ ಪ್ರತಿಯೊಂದು ಸರಕಿನಿಂದಲೂ ಹೊರಬಂದಂತೆ ಭಾಸವಾಯಿತು.

''ಏನಪ್ಪಾ ಮತ್ತೆ ಸಮಾಚಾರ? ಯಾವಾಗ ಬಂದೆ ಊರಿಗೆ?''

ಹಾಗೆ ಕೇಳುವಾಗ ಸುರೇಶನ ಮುಖದ ಮೇಲೆ ಮೂಡಿದ ನಗು ಇಷ್ಟು ಹೊತ್ತು ತಾನು ಅಂಗಲಾಚಿದ ಮುಜುಗರವನ್ನು ಮರೆಸುವ ವ್ಯಾಪಾರೀನಗೆಯಂತಿತ್ತು.

''ನಾನು ಮೊನ್ನೆ ಬಂದೆ. ಏನಿದು ನಿನ್ನ ಕಥೆ?''

ಶಿಶಿರ ಕಳವಳದಿಂದ ಕೇಳಿದ.

''ಇದು ಕಥೆ ಅಲ್ಲ ಮಾರಾಯ, ಜೀವನ.''

ಸೂರಿ ಜೋರಾಗಿ ನಕ್ಕು ಮುಂದುವರಿಸಿದ.

''ಸಾರಿ, ನಿಂಗೆ ಕಾಲ್ ಮಾಡೋಕಾಗ್ಲಿಲ್ಲ ಇತ್ತೀಚೆಗೆ. ಹಳ್ಳಿ ಮನೆಯ ಅಂಗಡಿ ಅಂದ್ರೆ ಇನ್ನು ಹೇಗಿರತ್ತೆ ಹೇಳು? ಹೇಳೀಕೇಳೀ ಮಳೆಗಾಲ ಬೇರೆ. ಏನೇನೂ ವ್ಯಾಪಾರ ಇಲ್ಲ ಮಾರಾಯಾ. ಇಲ್ನೋಡು, ಆರು ತಿಂಗಳ ಕೆಳಗೆ ತಂದ ಐಟಮ್‌ಗಳೆಲ್ಲ ಹಾಗಾಗೇ ಬಿದ್ದಿದಾವೆ. ನಂದು ಮಾತ್ರ ಅಲ್ಲ, ಇಲ್ಲಿನ ಎಲ್ಲರದ್ದೂ ಇದೇ ಕಥೆ. ಇತ್ತೀಚೆಗೆ ಮನೆಗೊಂದು ಕಾರು, ತಲೆಗೊಂದು ಬೈಕು ಬಂದ ಮೇಲೆ ಜನಕ್ಕೆ ಪಟ್ಟಣ ತುಂಬಾ ಹತ್ರ ಆಗಿದೆ. ಎರಡು ರೂಪಾಯಿಯ ಪೆನ್ಸಿಲ್ ಕೊಳ್ಳೋದಕ್ಕೂ ಅಲ್ಲಿಗೇ ಹೋಗ್ತಾರೆ. ಐದು ರೂಪಾಯಿ ಕೊತ್ತಂಬರಿ ಕಟ್ಟು ಬೇಕಂದ್ರೂ ಅವರ ಬೈಕು ನೇರ ಸಿಟಿಗೇ ಓಡ್ತದೆ. ನಿನ್ನ ಬದುಕೇ ಪರವಾಗಿಲ್ಲ. ತಿಂಗಳ ಸಂಬಳ ಅಂತ ಒಂದು ಮೊತ್ತವಾದರೂ ತಪ್ಪದೇ ಬರುತ್ತೆ. ಪಾಪ... ಎದುರುಗಡೆ ಅಂಗಡಿಯ ವಾಲ್ಮೀಕಿ ಮೊನ್ನೆ ಎಂಟ್ಹತ್ತು ಇಂತಿಂಥಾ ದೊಡ್ಡ ಚಿಪ್ಸು, ಮೈದಾಹಿಟ್ಟು, ರಾಗಿ ಹಿಟ್ಟಿನ ವ್ಯಾಪಾರವಾಗದ ಪ್ಯಾಕೇಟುಗಳನ್ನ ತಂದು 'ದನಕ್ಕೆ ಕೊಡು' ಎಂದು ನಂಗೆ ಕೊಟ್ಟು ಹೋದ'' ಎನ್ನುತ್ತಾ ಅಂಗಡಿಯ ಮೂಲೆಯತ್ತ ಕೈತೋರಿಸಿದ. ಅಲ್ಲಿ ತಿಂಗಳಾನುಗಟ್ಟಲೆ ಬಿಕರಿಯಾಗಲು ಕಾದೂ ಕಾದೂ ಸೋತಿದ್ದ ವಿವಿಧ ಕಂಪನಿಯ ಲೇಬಲ್ ಹೊತ್ತ ಪ್ಯಾಕೇಟುಗಳು ಅಪರಾಧಿಗಳಂತೆ ತಲೆತಗ್ಗಿಸಿ ನಿಂತಿದ್ದವು.

''ಸಿಟಿ...''

ಅಷ್ಟಂದ ಶಿಶಿರ ಭಾರವಾಗಿ ನಿಟ್ಟುಸಿರಿಟ್ಟ.